ಅವುಗಳಲ್ಲಿ ಪ್ರಮುಖವಾಗಿ ವಿವಿಧ ಬೆಳೆಗಳಲ್ಲಿ ತಳಿ ಅಭಿವೃದ್ಧಿ ಬೆಳೆ ಉತ್ಪಾದನೆಯ ಶಾಂತ್ರಿಕತೆಗಳು, ಸಸ್ಯ ಸಂರಕ್ಷಣೆ ಪಶು ವಿಜ್ಞಾನ ಮತ್ತು ಪಶು ವೈದ್ಯಕೀಯ ವಿಷಯಗಳು ಹಾಗೂ ಗ್ರಾಮೀಣ ಗೃಹ ವಿಜ್ಞಾನ ಇವುಗಳಲ್ಲಿ ಹೊಸ ಸಂಶೋಧನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅನುಬಂಧ-3ರಲ್ಲಿ ಕಾರ್ಯಕ್ರಮಗಳ ವಿವರಗಳನ್ನು ನೀಡಲಾಗಿದೆ.

ಧಾರವಾಡದ ವಾಲ್ಮಿ ಸಂಸ್ಥೆಯ ಕಾರ್ಯಕ್ರಮಗಳು

1635 (1788) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ವಾಲ್ಮಿ (ಜಲ ಮತ್ತು ಭೂ ಸಂಶೋಧನೆ) ಸಂಸ್ಥೆಯಲ್ಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು;

ಆ) ನೀರಿನ ಉಪಯೋಗದ ಬಗ್ಗೆ ಹಾಗೂ ಭೂಮಿಯ ಫಲವತ್ತತೆ ಕಾಯ್ದುಕೊಳ್ಳಲು ನೀರಾವರಿ ಪ್ರದೇಶದ ರೈತರಿಗಾಗಿ ಈ ಸಂಸ್ಥೆಯು ಯಾವ ಕಾರ್ಯಕ್ರಮ ಹಾಕಿಕೊಂಡಿದೆ;

ಇ) ಈ ಸಂಸ್ಥೆಯಲ್ಲಿ ನೀರಿನ ಮತ್ತು ಮಣ್ಣಿನ ಗುಣಧರ್ಮಗಳ ಬಗ್ಗೆ ಅಭ್ಯಾಸ ಮಾಡಿರುವ ತಜ್ಞರು ಇರುವರೇ; (ವಿವರ ನೀಡುವುದು)

ಈ) ಕೃಷಿ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ಪದವಿ ಪಡೆದವರು ಎಷ್ಟು ಜನ ಸಿಬ್ಬಂದಿ ಇದ್ದಾರೆ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ವಿವಿಧ ಹುದ್ದೆಗಳ ಸಂಖ್ಯೆ : 46

ಖಾಲಿ ಹುದ್ದೆ : 21

ಆ) ವಾಲ್ಮಿ ಸಂಸ್ಥೆಯು ಹಮ್ಮಿಕೊಂಡ ಕಾರ್ಯಕ್ರಮಗಳು ನೀರಾವರಿ ನಿರ್ವಹಣೆ ಹಾಗೂ ಭೂ ಅಭಿವೃದ್ಧಿ ಬಗ್ಗೆ ರಾಜ್ಯದ ನೀರಾವರಿ ಯೋಜನೆಗಳಲ್ಲಿನ ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಆಯ್ದ ಫಲಾನುಭವಿ ರೈತರಿಗೆ ತರಬೇತಿ ನೀಡುವುದು, ಸಂಸ್ಥೆಯ ಪ್ರಾಂಗಣದಲ್ಲಿ ತರಬೇತಿಗಾಗಿ ಅವಶ್ಯವಿರುವ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು; ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳು, ಮಹಾಮಂಡಳಗಳು ಮತ್ತು ನೀರಾವರಿ ಪ್ರದೇಶದ ರೈತರಿಗೆ ತಾಂತ್ರಿಕ ನೆರವು ನೀಡುವುದು.

ತರಬೇತಿ ಕಾರ್ಯಕ್ರಮಗಳಲ್ಲಿ ನೀರಾವರಿ ಇಂಜಿನೀಯರಿಂಗ್, ಕೃಷಿ ಇಂಜಿನೀಯರಿಂಗ್, ಬೇಸಾಯ ಶಾಸ್ತ್ರ ಮಣ್ಣಿನ ಹಾಗೂ ಸಮಾಜ ಶಾಸ್ತ್ರದಲ್ಲಿ ಪರಿಣತಿ ಹೊಂದಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಅಪಾರ ಸೇವಾ ಅನುಭವವುಳ್ಳ ತಜ್ಞರು ಉಪನ್ಯಾಸ ನೀಡುತ್ತಾರೆ. ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳ ರೈತರು ಹಾಗೂ ರೈತ ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮಗಳನ್ನು ವಾಲ್ಮಿ ಸಂಸ್ಥೆ, ಧಾರವಾಡದಲ್ಲಿ ನಡೆಸಲಾಗುತ್ತಿದೆ. ನೀರು ಬಳಕೆದಾರರ ಸಹಕಾರ ಸಂಘಗಳ ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳ ಯೋಜನಾ ಮಟ್ಟದ ಮಹಾಮಂಡಳಗಳ (ಒಕ್ಕೂಟದ) ಪದಾಧಿಕಾರಿಗಳ ತರಬೇತಿಗೆ ಆದ್ಯತೆ ನೀಡಲಾಗಿದೆ. ಏಪ್ರಿಲ್ 2002 ರಿಂದ 6ನೇ ಮಾರ್ಚ್ 2003ರ ವರೆಗೆ 16 ತರಬೇತಿಗಳನ್ನು ಹಾಗೂ ಕಾರ್ಯಾಗಾರಗಳನ್ನು ನಡೆಸಿ 868 ರೈತರಿಗೆ ತರಬೇತಿ

ನೀಡಲಾಗಿದೆ. ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳಿಗಾಗಿ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿ, ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ನೀರು ಬಳಕೆದಾರರ ಸಹಕಾರ ಸಂಘಗಳಿಗೆ 100 ಜನ ರೈತ ಪದಾಧಿಕಾರಿಗಳನ್ನು ಕರೆದೊಯ್ದು ಅಲ್ಲಿನ ರೈತರಿಂದ ನೀರಾವರಿ ನಿರ್ವಹಣೆ ಹಾಗೂ ನೀರಾವರಿ ಕೃಷಿಗೆ ಸಂಬಂಧಿಸಿದಂತೆ ಅಳವಡಿಸಲಾದ ಪದ್ಧತಿಗಳ ಬಗ್ಗೆ ಮಾಹಿತಿ ಕೊಡಿಸಿ, ರೈತರು ಎಲ್ಲ ವಿಷಯಗಳ ಬಗ್ಗೆ, ಅಧಿಕಾರಿಗಳು ಹಾಗೂ ತಜ್ಞರ ಸಮ್ಮುಖದಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ. ನೀರು ಬಳಕೆದಾರರ ಸಹಕಾರ ಸಂಘಗಳು ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳ ಯೋಜನಾ ಮಟ್ಟದ ಮಹಾಮಂಡಳಗಳನ್ನು ನೀರಾವರಿ ನಿರ್ವಹಣೆಯಲ್ಲಿ ತೊಡಗಿಸಿದ ನಂತರ ಬಂದ ಅನುಭವವನ್ನು ಹಂಚಿಕೊಳ್ಳಲು ಹಾಗೂ ಈ ಪ್ರಕ್ರಿಯೆಯು ಸುಗಮವಾಗಿ ನಡೆಸಲು ಸರ್ಕಾರವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕಾರ್ಯಾಗಾರವನ್ನು ದಿನಾಂಕ 24-1-2003ರಂದು ಏರ್ಪಡಿಸಲಾಯಿತು. ಈ ವರ್ಷ ಇನ್ನೂ ಎರಡು ಮೂರು ದಿನಗಳ ರೈತ ಪದಾಧಿಕಾರಿಗಳ ತರಬೇತಿಗಳು ಏರ್ಪಡಿಸಲಾಗುವುದು.

ಜೂನ್ 2002 ರಿಂದ ಮಾರ್ಚ್ 2007ರ ವರೆಗೆ ಕೃಷಿ ವಿಶ್ವವಿದ್ಯಾಲಯ ಧಾರವಾಡದ ಸಹಯೋಗದೊಂದಿಗೆ ತರಬೇತಿಗೆ ಹಾಜರಾಗುವ ರೈತರಿಗೆ ಅನುಕೂಲವಾಗಲು ವಾಲ್ಮಿ ಪ್ರಾಂಗಣದಲ್ಲಿ ನೀರಾವರಿಗಾಗಿ ಭೂ ಅಭಿವೃದ್ಧಿ ವಿವಿಧ ಬೆಳೆಗಳಿಗೆ ಸೂಕ್ತವಾದ ನೀರಾವರಿ ಪದ್ಧತಿಗಳು, ನೀರಿನ ಮಿತವ್ಯಯ ಬಳಕೆ, ತುಂತುರು ಮತ್ತು ಹನಿ ನೀರಾವರಿ ಪದ್ಧತಿಗಳು, ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಸಿರೆಲೆ ಗೊಬ್ಬರ, ನೀರಾವರಿ, ಕೃಷಿ ತಾಂತ್ರಿಕತೆ, ಮೀನುಗಾರಿಕೆ ಕೃಷಿ, ತೋಟಗಾರಿಕೆ ಬೆಳೆ, ಸಾಮಾಜಿಕ ಅರಣ್ಯ ಹಾಗೂ ಎರೆಹುಳು ಕೃಷಿ ಸಂಬಂಧಪಟ್ಟ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗಿದೆ.

ಇ) ತಜ್ಞರು ಇರುವರು. ಸ್ನಾತಕೊತ್ತರ ಪದವಿ ಪಡೆದು ನೀರಾವರಿ ನಿರ್ವಹಣೆ ಜಲ ನೀತಿ, ನೀರಾವರಿ ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಹಾಗೂ ಭೂ ಅಭಿವೃದ್ಧಿಯಲ್ಲಿ ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಉನ್ನತ ತರಬೇತಿ ಪಡೆದ ತಜ್ಞರು ಸಂಸ್ಥೆಯಲ್ಲಿ ಇರುವರು. ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಹೊಂದಿ ಕೃಷಿ ಇಲಾಖೆಯಲ್ಲಿ 32 ವರ್ಷಗಳ ಸೇವಾ ಅನುಭವವುಳ್ಳ ಸಹಾಯಕ ನಿರ್ದೇಶಕರು ಇರುವರು. ಧಾರವಾಡದಲ್ಲಿ ನೆಲೆಸಿರುವ ನೀರಾವರಿ ಹಾಗೂ ಕೃಷಿ ತಜ್ಞರು ಮತ್ತು ಕೃಷಿ ವಿಶ್ವವಿದ್ಯಾಲಯದ ತಜ್ಞರ ಸೇವೆಯನ್ನು ತರಬೇತಿ ಕಾರ್ಯಕ್ರಮಗಳಲ್ಲಿ ಅತಿಥಿ ಉಪನ್ಯಾಸಕ್ಕಾಗಿ ಸಂಸ್ಥೆಯು ಪಡೆಯುತ್ತಿದೆ.

ಈ) ಕೃಷಿ ವಿಶ್ವ ವಿದ್ಯಾಲಯ ಧಾರವಾಡದ ಕೃಷಿ ಇಂಜಿನೀಯರಿಂಗ್‌ನ ಸಹ ಪ್ರಾಧ್ಯಾಪಕರೊಬ್ಬರು ವಾಲ್ಮಿ ಪ್ರಾಂಗಣದಲ್ಲಿ ಪ್ರಾತ್ಯಕ್ಷಿಕೆಗಳನ್ನು ಏಳವಡಿಸುವಲ್ಲಿ ಹಾಗೂ ರೈತರ ತರಬೇತಿಗಳಲ್ಲಿ ಉಪನ್ಯಾಸ ನೀಡುತ್ತಿರುವರು. (ಅವರ ಸಂಬಳವನ್ನು ಕೃಷಿ ವಿಶ್ವವಿದ್ಯಾಲಯಕ್ಕೆ, "ಇಂಟಲೆಕ್ಚುವಲ್ ಚಾರ್ಜಸ್" ಅಂತ ವಾಲ್ಮಿ ಸಂಸ್ಥೆಯಿಂದ ಪಾವತಿ ಮಾಡಲಾಗುತ್ತದೆ).

ರಾಜ್ಯದಲ್ಲಿ ಬರಡಾಗಿರುವ ಭೂಮಿ

1636 (1789) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ತಾಲ್ಲೂಕುಗಳ ಭೂಮಿ ಜವಳು ಬಂದಿರುವುದು; ಬೆಳೆ ಪಡೆಯಲು ಸಾಧ್ಯವಿಲ್ಲದ ಪ್ರದೇಶಗಳ ವಿವರ ನೀಡುವುದು;